Statement by Sri B. Y. Neele Gowda clarifying certain matters raised by another Member.

†ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—18ನೆಯ ತಾರೀಖು 289ನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಪೂರ್ಣ ವಿವರಗಳನ್ನು ಈ ಸಭೆಗೆ ಒದಗಿಸದೇ ಇರುವ ಪ್ರಯುಕ್ತ ನನ್ನ ವೈಯಕ್ತಿಕ ವಿಚಾರದಲ್ಲಿ ಈ ಸಭೆಗೆ ಸ್ವಲ್ಪ ಅನುಮಾನ ಉಂಟಾಗಬಹುದು ಎಂದು ನನಗೆ ಕಂಡು ಬಂದ ಪ್ರಯುಕ್ತ ವಿವರಗಳನ್ನು ಕೊಟ್ಟು ನನ್ನ ಸ್ವಂತ ಎಕ್ಸ್‌ಪ್ಲನೇಷನ್‌ನ್ನು ಹೇಳಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಿ ಎಂದು ತಮ್ಮನ್ನು ಕೇಳಿಕೊಂಡು ತಾವು ಉದಾರ ಮನಸ್ಸು ಮಾಡಿ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ತುಂಬಾ ಋಣಿಯಾಗಿದ್ದೇನೆ.

ಸ್ವಾಮಿ, ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಸದಸ್ಯರು 6000 ಜನ ಇದ್ದಾರೆ. ಅದರಲ್ಲಿ ಶ್ರೀಮಾನ್ ದೇವಯ್ಯನವರೂ ಒಬ್ಬರು. ಅದಕ್ಕೆ ಬೈ ಲಾ ಪ್ರಕಾರ ಥೇರ್ಮನ್‌ರು, ಡೈರೆಕ್ಟರುಗಳಿಗೆ ಏನು ಕೊಡಬೇಕೆಂಬುದನ್ನು ಜನರಲ್ ಬಾಡಿ ತೀರ್ಮಾನ ಮಾಡಬೇಕೆಂದು ಇದೆ. ಅಷ್ಟೇ ಅಲ್ಲ, ಸರ್ಕಾರದವರೂ ಕೂಡ ಒಂದು ಹುಕುಂನ್ನು ಹೊರಡಿಸಿದ್ದಾರೆ. ಜನರಲ್ ಬಾಡಿಯಲ್ಲಿ ಚೇರ್ಮನ್‌ರಿಗೆ ಏನು ಸೌಲಭ್ಯ ಕೊಡಬೇಕೆಂಬುದನ್ನು 1963ನೇ ಮಾರ್ಚಿಯಲ್ಲಿ ನಡೆದ ಜನರಲ್ ಬಾಡಿಗೆ ಶ್ರೀಮಾನ್ ದೇವಯ್ಯನವರಿಗೂ ಆ ರಿಪೋರ್ಟನ್ನು ಕಳುಹಿಸಿತ್ತು—ಅವರ ಅನುಮತಿಯನ್ನು ಪಡೆಯಲಾಗಿ 1963ನೇ ಜನರಲ್ ಬಾಡಿಯಲ್ಲಿ ಚೇರ್ಮನ್‌ರಿಗೆ ಒಂದು ಕಾರು ಕೊಡುವುದು, ಸ್ವಂತಕ್ಕೆ ಪೆಟ್ರೋಲ್ ಇಲ್ಲದೆ ಮತ್ತು ಒಬ್ಬ ಡ್ರೈವರ್ ಕೊಡುವುದು ಎಂದು ತೀರ್ಮಾನವಾಗಿತ್ತು. ಅಲ್ಲದೆ 500 ರೂಪಾಯಿ ಪೆಟ್ರೋಲ್‌ಗೆ ಕೊಡುವುದು ಎಂದೂ ಆಗಿತ್ತು. ಪೆಟ್ರೋಲ್ ಖರ್ಚು ಏಕೆ ಎಂದರೆ ಮಂಡ್ಯದಿಂದ ಪಾಂಡವಪುರಕ್ಕೆ ಆಫೀಸಿಗೆ ಹೋಗುವುದಕ್ಕೆ 18 ಮೈಲಿ ಆಗುತ್ತದೆ. ಆ ಏರಿಯಾದಲ್ಲಿ 4 ತಾಲ್ಲೂಕುಗಳು ಇವೆ, ಅಲ್ಲಿ ಕಬ್ಬು ಬೆಳೆಯುತ್ತಾ ಇದ್ದಾರೆ, ಆ ನಾಲ್ಕು ತಾಲ್ಲೂಕ ನಲ್ಲೂ ಸದಸ್ಯರು ಇದ್ದಾರೆ. ಆದ್ದರಿಂದ ಆ ಪ್ರದೇಶದಲ್ಲಿ ತಿರುಗಾಡುವುದಕ್ಕೆ ಮತ್ತು ಮಂಡ್ಯದಿಂದ ಫ್ಯಾಕ್ಟರಿಗೆ ಹೋಗಬೇಕಾದರೆ ಅದಕ್ಕೆ 500 ರೂಪಾಯಿ ಪೆಟ್ರೋಲ್‌ಗೆ ಬೇಕಾಗುತ್ತದೆ ಎಂದು ಕೊಟ್ಟಿದ್ದಾರೆ, ಅದು ಹೊರತು ಬೇರೆ ಯಾವ ವಿಧವಾದ ಟಿ.ಎ., ಡಿ.ಎ. ತೆಗೆದುಕೊಳ್ಳುವ ಹಾಗಿಲ್ಲ. ಆ ಕಂಡೀಷನ್ ಮೇಲೆ ಕೊಟ್ಟಿದ್ದಾರೆ. ಈ ಜನರಲ್ ಬಾಡಿ ಒಂದು ಸಾವರಿನ್ ಬಾಡಿ, ಈ ಸೌಕರ್ಯಗಳನ್ನು ಸ್ವಂತಕ್ಕೆ ಎಂದು ನನಗೆ ಕೊಟ್ಟಮೇಲೆ ಅದನ್ನು ನಾನು ಸ್ವಂತಕ್ಕೆ ಉಪಯೋಗಿಸಿ ಕೊಳ್ಳುವುದಕ್ಕೆ ನನಗೆ ಹಕ್ಕು ಇದೆ ಎಂದು ನನ್ನ ಅಭಿಪ್ರಾಯ. ಇದು ಒಂದನೆಯದು. ಕಾರನ್ನು ಅಸೆಂಬ್ಲಿಗೆ ತೆಗೆದುಕೊಂಡು ಬಂದಿದ್ದೇನೆ, ಅಸೆಂಬ್ಲಿಗೆ ತರುವಾಗ ಕಾರ್ ಡ್ರೈವರನ್ನು ಉಪಯೋಗಿಸಿ ಕೊಳ್ಳುವ ಹಾಗಿಲ್ಲ, ಆ ಖರ್ಚನ್ನು ನಾನೇ ಹಾಕಿಕೊಳ್ಳುತ್ತೇನೆ. ಎರಡನೆಯದು ಚೇರ್ಮನ್‌ರಾಗಿದ್ದವರು ಆ ಏರಿಯಾದಲ್ಲಿ ಏಕೆ ಹೋಗಬೇಕೆಂದು ಕೆಲವು ಮಾನ್ಯ ಸದಸ್ಯರಿಗೆ ಅನುಮಾನ ಬರಬಹುದು. ಸ್ವಾಮಿ ಸಕ್ಕರೆ ಕಾರ್ಖಾನೆ ನಡೆಸುವುದು ಬಹಳ ಕಷ್ಟವಾದ ಕೆಲಸ. ಕಬ್ಬನ್ನು ನೆಡಸುವುದು, ಕಬ್ಬನ್ನು ಸಪ್ಲೈ ಮಾಡುವುದು ಯಾವ ಕಾರ್ಖಾನೆಯಲ್ಲಿ ಒಳ್ಳೆಯ ಚೆನ್ನಾಗಿರುವ ಆರ್ಗನೈಸೇಷನ್ ಇರುತ್ತದೆ ಅಂತಹ ಕಡೆ ಬಹಳ ಚೆನ್ನಾಗಿ ನಡೆಯುತ್ತದೆಯೇ ಹೊರತು ಇಲ್ಲದೇ ಇದ್ದರೆ ಅದು ಬದ್ದು ಹೋಗುತ್ತದೆ. ಅದಕ್ಕೆ ಹಾನಿ ಬಂದೇ ಬರುತ್ತದೆ. ಈ ಜವಾಬ್ದಾರಿಯುತವಾದ ಕೆಲಸಕ್ಕೆ ಅನೇಕ ಸಾರಿ ನಾನು ಸರ್ಕಾರದವರನ್ನು ಕೇಳಿಕೊಂಡೆ ಸರಿಯಾದ ಒಬ್ಬ ಅಧಿಕಾರಿಯನ್ನು ಕೊಡಿ ಎಂದು. ಕೊಡಲಿಲ್ಲ. ಅಡ್ಜಸ್ಟ್‌ಮೆಂಟ್ ಮಾಡಿದ್ದೂ ಆಯಿತು, ಸರಿಯಾದವರು ಸಿಕ್ಕಲಿಲ್ಲ. ಕೊನೆಯದಾಗಿ ಅದರ ಪೂರ್ಣ ಜವಾಬ್ದಾರಿಯನ್ನು ನಾನೇ ವಹಿಸಿಕೊಂಡೆ. ವಹಿಸಿಕೊಂಡದ್ದರ ಫಲವಾಗಿ, ಈ ದಿವಸ ಇಂಡಿಯಾ ದೇಶದಲ್ಲಿ ಜೂನ್ ತಿಂಗಳಿನಲ್ಲಿ ಯಾವ ಫ್ಯಾಕ್ಟರಿಯೂ ನಡೆಯುತ್ತಿಲ್ಲ—ಸಕ್ಕರೆ ಅಭಾವ ಇರುವ ಇಂತಹ ಪರಿಸ್ಥಿತಿಯಲ್ಲೂ ಕೂಡ ಪಾಂಡವಪುರದ ಸಕ್ಕರೆ ಕಾರ್ಖಾನೆ ಒಂದೇ ನಡೆಯುತ್ತಾ ಇರುವುದು.....

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಸದಸ್ಯರು ಕೊಡುವ ಹೇಳಿಕೆಯಲ್ಲಿ ತಾವು ಮಾಡಿದ್ದನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡುವುದು ಉಚಿತವಾಗಿ ಕಾಣುವುದಿಲ್ಲ.

Mr. SPEAKER.—Does Sri S. Gopala Gowda suggest that every Member is bound to submit his statement ?

ಶ್ರೀ ಎಸ್. ಗೋಪಾಲಗೌಡ.—ಹಾಗೆ ತಪ್ಪಾಗೆ ಬೇಕಾದ ಎಲ್ಲಾ ವಿಷಯವನ್ನೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದು ಕ್ರಮಬದ್ಧವಲ್ಲವೆಂ ದು ನನ್ನ ಅಭಿಪ್ರಾಯ ಏಕೆಂದರೆ. ಎರಡು ಮೂರು ವಾಕ್ಯ ಅವರು ಹೇಳಿದ್ದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ, ಅದು ಸೆಲ್ಫ್ ಎಕ್ಸ್‌ಪ್ಲನೇಷನ್ ಆಗುವುದಿಲ್ಲ ; ಅದು ಬೇರೆ ವಿಷಯಕ್ಕೆ ಸಂಬಂಧಪಟ್ಟ ಭಾಷಣವಾಗುತ್ತದೆ ಎಂದು. ಇದು ನನ್ನ ಅಭಿಪ್ರಾಯ. ಇದನ್ನು ತಾವು ವಿಚಾರ ಮಾಡುವುದು ಒಳ್ಳೆಯದು.

† Indicates that the remarks or speeches have not been revised by the member concerned

Mr. SPEAKER.—I will decide the Point of Order. There is no merit in the Point of Order, because I cannot compel anybody when he make a personal statement to [give it to me in advance. I may have the discretion, but there is nothing that compels me to ask for a copy of the statement in advance so that I may scrutinize it. For the purpose of co-ordinating the work, I may do it in delicate cases. So far as his objection to the personal matters mentioned by Sri B. Y. Neele Gowda is concerned, I do not think it is irrelevent. If there is anything that transgresses the limit, I will see that it is not done. I do not know what exactly the Hon'ble Member Sri Gopala Gowda means. I am not concerned with the opinion of the Member. He may raise a Point of Order. He know that I have given Sri Neele Gowda permission, to make a statement. I rule out the Point of Order raised by Sri Gopala Gowda.

Sri S. SIVAPPA (Sravanabelagola).—On a Point of Order, Sir. Is the Hon'ble Member Sri Neele Gowda making a speech under the cover of a statement relating to what services he has rendered ? In case he goes one point away from the subject matter, *i.e.*, the point raised by Sri J. Devaiah, the chair must allow Sri Devaiah also to make a statement here as was done in the case of Sri B. J. Linge Gowda.

Mr. SPEAKER.—If the member wants to say anything specific, he must raise it under some specific rule and seek permission to speak. Sri Neele Gowda may continue his speech.

ಶ್ರೀ ಬಿ. ವೈ. ನೀಲೇಗೌಡ.—ಸ್ವಾಮಿ, ನನ್ನ ಅಪಾದನೆ ಶ್ರೀಮಾನ್ ದೇವಯ್ಯನವರ ಮೇಲೆ ಅಲ್ಲ. ಸರ್ಕಾರದವರಿಗೆ ಪೂರ್ಣ ವಿವರಅವರ ಹತ್ತಿರ ಇರಲಲ್ಲವೇನೋ ಅದ್ದರಿಂದ ಅವರು ಕೊಡಲಲ್ಲ. ಅದನ್ನು ನಾನು ಕೊಡುತ್ತೇನೆ ಎಂದು ಹೇಳಿದೆನೇ ಹೊರತು ದೇವಯ್ಯನವರ ಮೇಲೆ ಅಪಾದನೆ ಹೊರಿಸುವುದಕ್ಕೆ ನಾನು ನಿಂತುಕೊಳ್ಳಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದ ಪರವಾಗಿ ಸರ್ಕಾರದವರು ವಿವರ ಕೊಡಲಲ್ಲ. ಅದ್ದರಿಂದ ನಾನು ಕೊಡುತ್ತೇನೆ ಎಂದು ಹೇಳುವುದು ಈ ಸಭೆಯಲ್ಲ ನಡೆಯುವ ಕ್ರಮವಲ್ಲ. ಸರ್ಕಾರದವರು ಏಕೆ ಕೊಡಲಿಲ್ಲ ? ಅವರಿಗೆ ಏಕೆ ವಿವರಗಳು ಸಿಕ್ಕಲಿಲ್ಲ ?

Mr. SPEAKER.—Is Sri S. Gopala Gowda raising a point of order ?

ಶ್ರೀ ಎಸ್. ಗೋಪಾಲಗೌಡ.—ಹೌದು ಸ್ವಾಮಿ ಪಾಯಿಂಟ್ ಆಫ್ ಆರ್ಡರ್. ಈ ಸಭೆಯಲ್ಲ ಯಾವ ಆಪಾದನೆಗಳನ್ನು ಯಾವ ಸದಸ್ಯರ ಮೇಲೆ ಮಾಡಲಾಗಿದೆ ಅಥವಾ ಯಾವುದು ಸತ್ಯಕ್ಕೆ ದೂರವಾದ ಅಭಿಪ್ರಾಯವಾಗಿದೆ ಅದನ್ನು ಮಾತ್ರ ಅಲ್ಲಗಳೆಯುವುದಕ್ಕೆ ಇಲ್ಲ ಅವಕಾಶ ಇರುತ್ತದೆಯೇ ಹೊರತು ಸರ್ಕಾರದವರು ಸರಿಯಾದ ಉತ್ತರ ಕೊಟ್ಟಿಲ್ಲ, ಅದ್ದರಿಂದ ನನ್ನ ಹತ್ತಿರ ಪೂರ್ಣ ವಿವರ ಇದೆ, ನಾನು ಆ ಉತ್ತರ ಕೊಡುತ್ತೇನೆ, ತಾವು ನನಗೆ ಅವಕಾಶ ಕೊಡಿ ಎಂದು ಅವರು ಕೇಳಿದರೆ ತಾವು ಅದಕ್ಕೆ ಅವಕಾಶ ಕೊಡುವುದಾದರೆ ನಾನೂ ಬಹಳ ವಿಷಯಗಳನ್ನು ಹೇಳಬೇಕಾಗುತ್ತದೆ. ನನಗೂ ಇಂತಹ ಅವಕಾಶಗಳನ್ನು ತಾವು ಕೊಡಬೇಕಾಗುತ್ತದೆ ಎಂದು ಹೇಳುತ್ತೇನೆ. ಸರ್ಕಾರದವರು ಅನೇಕ ಉತ್ತರಗಳನ್ನು ಪೂರ್ಣವಾಗಿ ಕೊಟ್ಟಿರುವುದಿಲ್ಲ ಕೆಲವು ಸಂದರ್ಭಗಳಲ್ಲಿ ತಪ್ಪಾಗಿ ನಮ್ಮ ಉದ್ದೇಶಕ್ಕೆ ವಿರುದ್ಧವಾದ ಅಭಿಪ್ರಾಯ ಬಂದಿರುತ್ತದೆ ಆದ್ದರಿಂದ ತಾವು ಇದನ್ನು ಮತ್ತೆ ಪುನರ್ವಿಮರ್ಶಿಸಿ—ಇಂತಹ ಹೇಳಿಕೆಗಳನ್ನು ಕೊಡುವುದಕ್ಕೆ ಅವಕಾಶ ಕೊಡುವುದು ಸರಿಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

Mr. SPEAKER.—The Hon'ble Member seems to be greatly confused, If a question hurts any particular Member, there is a provision for it. The point raised by Sri S. Gopala Gowda is something totally different.

ಶ್ರೀ ಬಿ. ವೈ. ನೀಲೇಗೌಡ.—ಸ್ವಾಮಿ, ನಾನು ಹೇಳಿಕೆ ಕೊಡುವಾಗ ನಾನೇನು ಮಾಡುತ್ತಿದ್ದೇನೆ ಎಂಬುದನ್ನು ಸ್ವಲ್ಪ ಹೇಳಬೇಕಾದ ಆವಶ್ಯಕತೆ ಇದೆ. 500 ರೂಪಾಯಿಗಳನ್ನು ಪೆಟ್ರೋಲಿಗಾಗಿ ಕೊಡುತ್ತಿದ್ದಾರೆ, ಅದಕ್ಕೆ ಆಧಾರವಿದೆ ಎಂದು ತಿಳಿಸುವುದಕ್ಕಾಗಿ ನಾನು ಮಾಡುತ್ತಿರುವ ಕೆಲಸದ ವಿಚಾರವನ್ನು ಸಭೆಗೆ ತಿಳಿಸಬೇಕಾಗಿದೆ. ನಮ್ಮ ಕಾರ್ಖಾನೆಯ ಬೈಲಾ ಪ್ರಕಾರ ಮತ್ತು

ಸರ್ಕಾರಿ ಆರ್ಡರಿನ ಪ್ರಕಾರ ಮತ್ತು ಜನರಲ್ ಬಾಡಿ ತೀರ್ಮಾನದ ಪ್ರಕಾರ ಕೆಲಸ ನಡೆಯುತ್ತಿದೆ. ಜನರಲ್ ಬಾಡಿಯವರು ಮಾಡಿರುವುದು ತಪ್ಪು ಎಂದು ಬೇಕಾದರೆ ಸರ್ಕಾರ ಹೇಳಲಿ. ಇದು ನನ್ನ ಸ್ವಂತಕ್ಕೆ ಸಂಬಂಧಪಟ್ಟಿದೆ.

ಅಧ್ಯಕ್ಷರು.—ಸ್ವಂತ ಅಂದರೆ ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ವೈ. ನೀಲೇಗೌಡ.—ಪರ್ಸನಲ್ ಯೂಸ್.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ನನಗೆ ತಿಳಿದಹಾಗೆ ಕಂಪೆನಿಯ ಕೆಲಸಕ್ಕೆ ಕೊಡಬೇಕಾದ್ದು ಸರಿ. ಸ್ವಂತಕ್ಕೆ ಕೊಟ್ಟಿದ್ದಾರೆಂದರೆ ಹೇಗೆ ?

Mr. SPEAKER.—The Hon'ble Member is deliberately putting something wrong by saying 'for personal use'.

ಶ್ರೀ ಬಿ. ವೈ. ನೀಲೇಗೌಡ.—ಆ ರೀತಿ ನಿರ್ಣಯವಾಗಿದೆ. ಜನರಲ್‌ಬಾಡಿ-ಒಂದು ಸುಪ್ರೀಂ ಬಾಡಿ ಮಾಡಿರುವ ನಿರ್ಣಯ ತಪ್ಪು ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಹಕ್ಕಿದೆ. ನಿರ್ಣಯವಿರುವ ವರೆಗೆ ಪರ್ಸನಲ್ ಯೂಸ್‌ಗೆ, ಅಸೆಂಬ್ಲಿಗೆ ಬರುವುದಕ್ಕೆ ಕೂಡ ಉಪಯೋಗಿಸಿಕೊಳ್ಳಲು ಹಕ್ಕಿದೆ ಎಂದು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ. ಇದೊಂದು ಬಹಳ ಸಣ್ಣ ವಿಷಯ. ಈ ದೇಶದಲ್ಲಿ ಬಹಳ ಜನ ಚೇರ್ಮನ್ನರಿದ್ದಾರೆ. ಒಂದು ಕೇವಲ ಸಣ್ಣ ವಿಷಯವನ್ನು ಬಹಳ ದೊಡ್ಡದಾಗಿ ಪತ್ರಿಕೆಯಲ್ಲಿ ಟೀಕಿಸಿದ್ದಾರೆ. ಇದಲ್ಲದೆ ಅನೇಕರು ಮುಖ್ಯಮಂತ್ರಿಗಳಾಗುವುದಕ್ಕೆ ಕೈವಾಡ ಕೂಡ ನಡೆಸುತ್ತಿದ್ದಾರೆ ಎಂದು ಸಹ ಪತ್ರಿಕೆಯಲ್ಲಿ ಹಾಕಿದ್ದಾರೆ. ಶ್ರೀಮತಿ ದೇವಮ್ಮನವರು ಆ ಸಭೆಯ ಸದಸ್ಯರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—289ನೆಯ ರೂಲ್‌ನಲ್ಲಿ ಈ ರೀತಿ ಇದೆ : ''ಒಬ್ಬ ಸದಸ್ಯರು ಪೂರ್ವಭಾವಿಯಾಗಿ ಅಧ್ಯಕ್ಷರಿಗೂ ಮತ್ತು ಸಂಬಂಧಪಟ್ಟ ಮಂತ್ರಿಯವರಿಗೂ ಒಂದು ವಿಚಾರದಲ್ಲಿ ತಿಳಿವಳಿಕೆ ಕೊಟ್ಟಿದ್ದು, ಮಂತ್ರಿಯವರು ಆ ವಿಚಾರದ ಮೇಲೆ ಪ್ರಶ್ನೆಗಳಿಗೆ ಉತ್ತರ ಹೇಳುವುದಕ್ಕಾಗಿ ತನಿಖೆ ನಡೆಸಲು ಅವರಿಗೆ ಅವಕಾಶ ದೊರೆತಿದ್ದು ಹೊರತು, ಒಬ್ಬ ಸದಸ್ಯರು ಯಾವ ಮನುಷ್ಯನಿಗೆ ವಿರುದ್ಧವಾಗಿಯಾದರೂ ಅವರಿಗೆ ಅವಮಾನವನ್ನುಂಟುಮಾಡುವ ಅಥವಾ ಅವನಮೇಲೆ ತಕ್ಸೀರಿನ ಆಪಾದನೆಯನ್ನು ಹೊರಿಸುವ ಸ್ವಭಾವದ ಯಾವ ಆಪಾದನೆಯನ್ನೂ ಮಾಡತಕ್ಕುದಲ್ಲ.

ಪರಂತು, ಅಂಥ ಆಪಾದನೆಯು ವಿಧಾನಸಭೆಯ ಘನತೆಗೆ ಕುಂದಕನ್ನುಂಟುಮಾಡುವುದಾಗಿದೆಯೆಂದಾಗಲಿ ಅಥವಾ ಅಂಥ ಆಪಾದನೆಯನ್ನು ಮಾಡುವುದರಿಂದ ಯಾವ ಸಾರ್ವಜನಿಕ ಹಿತವೂ ಸಾಧಿತವಾಗುವುದಿಲ್ಲವೆಂದಾಗಲಿ ವಿಧಾನಸಭೆಯ ಅಧ್ಯಕ್ಷರು ಅಭಿಪ್ರಾಯಪಟ್ಟಲ್ಲಿ ಯಾವ ಸದಸ್ಯರಾಗಲಿ ಅಂಥ ಆಪಾದನೆಯನ್ನು ಮಾಡುವುದನ್ನು ಅಧ್ಯಕ್ಷರು ಯಾವ ಸಮಯದಲ್ಲಾಗಲಿ ನಿರೋಧಿಸಬಹುದು.'' ಈಗ ಸಭೆಯ ಕುಂದುಕೊರತೆಗೆ ಧಕ್ಕೆ ಬರುವುದಾಗಿದೆ ಎಂದು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ತಪ್ಪು ಪರ್ಮಿಷನ್ ಕೊಟ್ಟಿದ್ದೀರಿ. ಆದರೆ ಮುಖ್ಯಮಂತ್ರಿಗಳ ವಿಷಯ ಮುಂತಾದ ಸಂಬಂಧವಿಲ್ಲದ ವಿಚಾರಗಳನ್ನೆಲ್ಲಾ ಅವರು ಹೇಳುತ್ತಿದ್ದಾರೆ.

Mr. SPEAKER.—Rule 293 is the proper Rule. The Hon'ble Member is misquoting the rule, and misinterpreting it.

Sri C.J. MUCKANNAPPA (Sira).—We must read rule 293 along with rule 289. ಈ ರೂಲ್ ಪ್ರಕಾರ ತಮಗೆ ಎಲ್ಲಾ ಅಧಿಕಾರ ಇದೆ. ಅಧ್ಯಕ್ಷರು ಯಾವ ಸಮಯದಲ್ಲಾದರೂ ನಿರೋಧಿಸಬಹುದು ಅಂದರೆ ಒಂದು ದಿನವೆಲ್ಲಾ ಬೇಕಾದರೂ ಅವಕಾಶ ಕೊಡಬಹುದೇ ಸ್ವಾಮಿ ? ಸಂಬಂಧಪಟ್ಟಿಲ್ಲದಿರುವುದನ್ನೆಲ್ಲಾ ಹೇಳಲು ಅವಕಾಶವಿಲ್ಲ.

ಶ್ರೀ ಎಸ್. ಗೋಪಾಲಗೌಡ.—293ನೆಯ ವಿಧಿಯ ಪ್ರಕಾರ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಲು ಅವಕಾಶ ಕೊಟ್ಟಿದ್ದೀರಿ. ಅದರಲ್ಲಿ ಈ ರೀತಿಯಿದೆ : 'In this case no debatable matter may be brought forward and no debate shall arise.'

Mr. SPEAKER.—He does not make it debatable. The Hon'ble Member is making it debatable.

ಅವರು ಹೇಳುವ ವಿಷಯ ಚರ್ಚಾಸ್ಪದವಾದ ವಿಷಯವೇ ? ನನಗನ್ನಿಸುವುದು .....

Sri G.V. GOWDA (Palya).—What we have understood, Rule 289 and 293 would be, when a person makes a statement in a debate or when the matter is under discussion and when he makes an allegation.....

Mr. SPEAKER.—He may tell me how does the Hon'ble Member make any statement on the point raised during the question hour.

Sri G. V. GOWDA.—It is to be decided whether the question put by my friend amounts to a statement. Is it not a fact that such and such a Chairman has misued something would it amount to a statement?

Mr. SPEAKER.— Please read rule 293.

Sri G. V. GOWDA.—Rule 293 says:

"A member may, with the permission of the Speaker, make a personal explanation although there is no question before the Assembly..."

Would not the allegation made by him, amount to a statement which calls for self explanation? That is my point.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದು ವಿಷಯ. ಅವರು ಮುಖ್ಯಮಂತ್ರಿಗಳಿಗೆ ಸಂಬಂಧ ಪಟ್ಟ ವಿಷಯವನ್ನು ಹೇಳಿದಾಗ ಅದನ್ನು ಹೇಳಬಾರದೆಂದು ತಾವು ಹೇಳಲಿಲ್ಲ. ಆಗ ತಾವು ಸುಮ್ಮನಿದ್ದಿರಿ.

9-30 A.M.

ಶ್ರೀ ಬಿ. ಪೈ. ನೀಲೇಗೌಡ.—ಸ್ಪ್ಯಾಮ್, ಇದು ನನ್ನ ಪೈಯುಕ್ತಕವಾದ ವಿಚಾರ. ಇಲ್ಲಿರುವ ಜನರಲ್‌ಬಾಡಿ ಸದಸ್ಯರೆಲ್ಲರೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಎಲ್ಲ ಅಂಕಿ ಅಂಶಗಳನ್ನೂ ಕೊಟ್ಟಿದ್ದಾರೆ. ಇದರ ಹಿನ್ನೆಲೆ ಏನು ಎನ್ನುವುದನ್ನು ಹೇಳುವಾಗ ನಾನು ಯಾರ ಮೇಲೂ ಆಪಾದನೆ ಮಾಡಬೇಕೆನ್ನುವ ದೃಷ್ಟಿ ನನಗೆ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಇದರಲ್ಲಿ ಪೊಲಟಿಕಲ್ ಬ್ಯಾಕ್‌ಗ್ರೌಂಡು ಇಟ್ಟುಕೊಂಡು ಇಲ್ಲಿ ಕೆಲಸಗಳು ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅಂತಹು ದೇನೂ ಇಲ್ಲ. ಕಾರ್ಖಾನೆಯು ಜನರಲ್ ಬಾಡಿಯವರು ನುಮಾರು ಆರುಸಾವಿರ ರೂಪಾಯಿಗಳಷ್ಟು ಹಣ ಕೊಟ್ಟು ಒಂದು ಕಾರನ್ನು ನನ್ನ ಕಂಟ್ರೋಲಿಗೆಂದು ಕೊಟ್ಟಿರುವುದನ್ನು ನಾನು ಕಬ್ಬಿನ ಬೆಳೆಯ ಮೇಲೆ ಸರಿಯಾದ ಕಂಟ್ರೋಲ್ ಇಟ್ಟುಕೊಂಡು ಇಲ್ಲಿನ ಕೆಲಸ ಕಾರ್ಯಗಳನ್ನು ನೋಡುವುದಕ್ಕಾಗಿ ಉಪಯೋಗಿಸುತ್ತಾಗುತ್ತಿದೆ. ಇದಕ್ಕಾಗಿ ಪೆಟ್ರೋಲು ಇತ್ಯಾದಿಗಳ ಖರ್ಚಿಗಾಗಿ 500 ರೂಪಾಯಿ ಗಳಷ್ಟನ್ನು ಕೊಡುತ್ತಿದ್ದಾರೆ, ಇದನ್ನು ಜನರಲ್ ಬಾಡಿಯವರು ಕೊಟ್ಟಿದ್ದಾರೆ. ಇದರಲ್ಲೇನಾದರೂ ಸಂದೇಹಗಳಿದ್ದರೆ ಜನರಲ್ ಬಾಡಿಯವರಿಗೆ ತಿಳಿಸಬಹುದು, ಇದರಲ್ಲಿ ನಾನೇನೂ ದುರುಪಯೋಗ ಪಡಿಸಿಕೊಂಡಿಲ್ಲ. ಒಂದು ವೇಳೆ ಸರ್ಕಾರಕ್ಕೆ ದುರುಪಯೋಗ ನಡೆದಿದೆ ಎಂದು ಕಂಡುಬಂದರೆ ಆ ವಿಚಾರವನ್ನು ಜನರಲ್ ಬಾಡಿಯವರಿಗೆ ತಿಳಿಸಿದರೆ ಅವರೇ ಅದನ್ನು ನೋಡಿಕೊಳ್ಳುತ್ತಾರೆ.

Mr. SPEAKER.—I have to bring it to the notice of the House that there was an undercurrent of grievance that the Report of the Debates are not published early enough. I find now that it is the other way about. Copies have been furnished and they are lying in the pigeon holes without being picked up by Members. It is not unlikely that if they are kept long enough, somebody else might pick them up. I would earnestly appeal to the Members to take them. If they do not want them, let them tell me and I will have them stored. The difficulty is that further instalments cannot be kept in the pigeon holes unless the papers already kept there are collected. The pigeon holes are small.

Sri SANJEEVANATH AIKALA (Suratkal).—Opposition members have taken the proceedings. The pigeon holes are empty, but the Congress Members are indifferent.

Mr. SPEAKER.— Did I make any distinction between Congress and non-Congress members? I am appealing to all the members.

Now Sri Keshava Murthy will continue the deabte on the non-official resolution.